**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಶ್ರೀರಂಗಪಟ್ಟಣ.**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆ : 19/2022**

**ಚಾ.ಸಾ. :-3**
**ಪ್ರಾ.ಸಾ. :-7**

| | |
|---|---|
| ಹೆಸರು | : ಯೋಗೇಶ |
| ತಂದೆಯ ಹೆಸರು | : ಕೆ.ಸ್ವಾಮಿ |
| ವಯಸ್ಸು | : 47 ವರ್ಷ |
| ಉದ್ಯೋಗ | : ಕಟ್ಟಡ ನಿರ್ಮಾಣ ಕೆಲಸ |
| ವಾಸಸ್ಥಳ | : ಪಾಲಹಳ್ಳಿ ಗ್ರಾಮ. |

**ಪ್ರಮಾಣೀಕರಿಸಲಾದ ದಿನಾಂಕಃ- 18.05.2026**

**ಮುಖ್ಯ ವಿಚಾರಣೆ : ಮಾನ್ಯ ಸ.ಸ.ಅ.ರವರಿಂದ :**

ಮೃತ ಮಂಜುನಾಥ್ ರವರು ಪರಿಚಯವಿಲ್ಲ. ಸುಮಾರು 4 ವರ್ಷಗಳ ಹಿಂದೆ ಶ್ರೀರಂಗಪಟ್ಟಣ-ಇಲವಾಲ ಮುಖ್ಯ ರಸ್ತೆಯಲ್ಲಿ 2 ದ್ವಿಚಕ್ರ ವಾಹನಗಳ ನಡುವೆ ಅಪಘಾತವಾಗಿತ್ತು. ಅಪಘಾತವಾದ ಸುಮಾರು 10 ನಿಮಿಷದ ನಂತರ ನಾನು ಸ್ಥಳಕ್ಕೆ ಹೋಗಿರುತ್ತೇನೆ. ಅಪಘಾತವನ್ನು ನಾನು ನೇರವಾಗಿ ನೋಡಿರುವುದಿಲ್ಲ. ಅಪಘಾತವು ಹೇಗೆ, ಯಾವ ರೀತಿ ಹಾಗೂ ಯಾರ ನಿರ್ಲಕ್ಷ್ಯತನದಿಂದ ಉಂಟಾಗಿರುತ್ತದೆ ಎಂಬುದು ನನಗೆ ಗೊತ್ತಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ಕೊಟ್ಟಿರುವುದಿಲ್ಲ.

*(ಈ ಹಂತದಲ್ಲಿ ಸ.ಸ.ಅ.ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸುವಂತೆ ಕೋರಿಕೊಂಡ ಮೇರೆಗೆ ದಾಖಲೆಗಳನ್ನು ಪರಿಶೀಲಿಸಿ ಪಾಟೀ ಸವಾಲು ಮಾಡಲು ಅವಕಾಶ ನೀಡಲಾಯಿತು.)*

**<u>ಪಾಟೀ ಸವಾಲು : ಮಾನ್ಯ ಸ.ಸ.ಅ.ರವರಿಂದ :</u>**

ದಿನಾಂಕಃ 25.10.2021 ರಂದು ನಾನು ಸದರಿ ರಸ್ತೆಯಲ್ಲಿ ಹೋಗುತ್ತಿದ್ದಾಗ ನನ್ನ ಮುಂದೆ ಹೋಗುತ್ತಿದ್ದ ದ್ವಿಚಕ್ರ ವಾಹನಕ್ಕೆ ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿ ಆತನ ದ್ವಿಚಕ್ರ ವಾಹನದಲ್ಲಿ ಅಡ್ಡಾದಿಡ್ಡಿಯಾಗಿ, ಅತಿವೇಗವಾಗಿ ಬಂದು ಡಿಕ್ಕಿಪಡಿಸಿದ್ದರಿಂದ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ಅಪಘಾತವನ್ನು ನಾನು ನೇರವಾಗಿ ನೋಡಿರುತ್ತೇನೆ ಎಂದರೆ ಸರಿಯಲ್ಲ.

ಸಾಕ್ಷಿಯು ಪೊಲೀಸರ ಮುಂದೆ ನೀಡಿದ ಸಂಪೂರ್ಣ ಹೇಳಿಕೆಯನ್ನು ಸಾಕ್ಷಿಯವರಿಗೆ ಓದಿ ಹೇಳಲಾಗಿ ಸಾಕ್ಷಿಯು ಸದರಿ ಹೇಳಿಕೆಯನ್ನು ಪೊಲೀಸರಿಗೆ ನೀಡಿರುವುದಿಲ್ಲ ಎಂದು ನಿರಾಕರಿಸಿದ ಮೇರೆಗೆ ಹೇಳಿಕೆಯನ್ನು ನಿಪಿ-17 ಎಂದು ಗುರುತಿಸಲಾಯಿತು. ಆರೋಪಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು:</u> ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಈ ದಿನ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಓದಲಾಗಿದೆ.

**ಪ್ರಧಾನ ಹಿರಿಯ ಸಿಜೆ ಮತ್ತು**
**ಜೆ.ಎಂ.ಎಫ್.ಸಿ., ಶ್ರೀರಂಗಪಟ್ಟಣ.**

**ಸಾಕ್ಷಿದಾರರ ಸಹಿ.**